# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 747 (842) |
| ಸದಸ್ಯರ ಹೆಸರು | ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ<br>(ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | 16.12.2024 |
| ಉತ್ತರಿಸುವವರು | ಮಾನ್ಯ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಅರಣ್ಯ ಇಲಾಖೆಯಲ್ಲಿ ಎಷ್ಟು ಜನ ಬುಡಕಟ್ಟು ಜನಾಂಗದವರು ಸರ್ಕಾರಿ ಉದ್ಯೋಗದಲ್ಲಿದ್ದಾರೆ: (ವೃಂದವಾರು ಜಿಲ್ಲಾವಾರು) ಮಾಹಿತಿ ನೀಡುವುದು) | ಅರಣ್ಯ ಇಲಾಖೆಯ ಸರ್ಕಾರಿ ಉದ್ಯೋಗದಲ್ಲಿರುವ ಬುಡಕಟ್ಟು ಜನಾಂಗದವರ ವೃಂದವಾರು, ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-1**ರಲ್ಲಿ ಒದಗಿಸಿದೆ. |
| ಆ) | ಅರಣ್ಯದ ಕುರಿತು ಹೆಚ್ಚಿನ ಜ್ಞಾನವುಳ್ಳ ಬುಡಕಟ್ಟು ಹಾಗೂ ವಿದ್ಯಾವಂತ ಯುವಕರಿಗಾಗಿ ಅರಣ್ಯ ಇಲಾಖೆಯಲ್ಲಿ ಯಾವುದಾದರೂ ವಿಶೇಷ ಮೀಸಲಾತಿ ಇದೆಯೇ: ಇಲ್ಲದಿದ್ದಲ್ಲಿ ಮೀಸಲಾತಿ ನೀಡುವ ಕುರಿತು ಸರ್ಕಾರದ ಮುಂದಿನ ನಿರ್ಧಾರಗಳೇನು: (ತಿಳಿಸುವುದು) | ಸರ್ಕಾರದ ಅಧಿಸೂಚನೆ ಸಂಖ್ಯೆ:FEE 203 FEG 2015 ದಿನಾಂಕ:06.08.2019ರಲ್ಲಿ ಅಧಿಸೂಚಿಸಿದ ಕರ್ನಾಟಕ ಅರಣ್ಯ ಇಲಾಖಾ ಸೇವೆಗಳು (ನೇಮಕಾತಿ) (ತಿದ್ದುಪಡಿ) ನಿಯಮಗಳು 2019ರಲ್ಲಿ ಈ ಕೆಳಗಿನ ವನ್ಯಜೀವಿ ವಿಭಾಗ/ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಸಂಬಂಧಿಸಿದ ಜಿಲ್ಲೆಯಲ್ಲಿನ ಸ್ಥಳೀಯ ಅರಣ್ಯ ಬುಡಕಟ್ಟು ಜನಾಂಗ (Local Forest Dwelling Tribes)ಕ್ಕೆ ಸೇರಿದ ಹಾಗೂ ಸದರಿ ವನ್ಯಜೀವಿ ವಿಭಾಗ/ಹುಲಿ ಸಂರಕ್ಷಿತ ಪ್ರದೇಶಗಳಲ್ಲಿನ ತಾಲೂಕಿನಲ್ಲಿ 1ನೇ ತರಗತಿಯಿಂದ 12ನೇ ತರಗತಿಯವರೆಗೆ ಒಂದು ಅಥವಾ ಹೆಚ್ಚಿನ ವರ್ಷಗಳಲ್ಲಿ ವಿದ್ಯಾಭ್ಯಾಸ ಮಾಡಿರುವ (i) ಜೇನು ಕುರುಬ, (ii) ಕಾಡು ಕುರುಬ, (iii) ಹಕ್ಕಿಪಿಕ್ಕಿ, (iv) ಸೋಲಿಗ, (v) ಸೋಲಿಗರು, (vi) ಯೆರವ, (vii) ಗೌಡ್ಲು, (viii) ಇರುಳರ್, (ix) ಇರುಳಿಗ, (x) ಕೊರಗ, (xi) ಮೆಲಕುಡಿ, (xii) ಮಲೈಕುಡಿ, (xiii) ಮಲೆರು, (xiv) ಮೇದಾ, (xv) ತೋಡಾ ಈ ಹದಿನೈದು ಸ್ಥಳೀಯ ಅರಣ್ಯ ಬುಡಕಟ್ಟು ಜನಾಂಗಕ್ಕೆ ಸೇರಿದ ಅಭ್ಯರ್ಥಿಗಳಿಗೆ ಅರಣ್ಯ ವೀಕ್ಷಕ (Forest |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | Watcher) ವೃಂದ ನೇರ ನೇಮಕಾತಿ ಪ್ರಕ್ರಿಯೆಯಲ್ಲಿ ಶೇ.50ರಷ್ಟು ಹಾಗೂ ಅರಣ್ಯ ರಕ್ಷಕ (Forest Guard; ಪ್ರಸ್ತುತ ಗಸ್ತು ಅರಣ್ಯ ಪಾಲಕ) ವೃಂದಗಳ ನೇರ ನೇಮಕಾತಿ ಪ್ರಕ್ರಿಯೆಯಲ್ಲಿ ಶೇ.30ರಷ್ಟು ವಿಶೇಷ ಮೀಸಲಾತಿಯನ್ನು ಈಗಾಗಲೇ ಕಲ್ಪಿಸಲಾಗಿರುತ್ತದೆ.<br>(a) Bandipur Tiger Reserve;<br>(b) Nagarahole Tiger Reserve;<br>(c) BRT Tiger Reserve, Chamarajanagar;<br>(d) Cauvery Wildlife Division;<br>(e) Bhadra Tiger Reserve, Chikkamagaluru;<br>(f) Kudremukh Wildlife Division, Karkala;<br>(g) Madikeri Wildlife Division;<br>(h) MM Hills Wildlife Division, Kollegal;<br>(i) Bannerghatta Wildlife Division;<br>(j) Kali Tiger Reserve, Dandeli;<br>(k) Shivamogga Wildlife Division, Shivamogga; |
| ಇ) | ಅರಣ್ಯ ಮತ್ತು ಕಾಡು ಪ್ರಾಣಿಗಳ ರಕ್ಷಣೆಗಾಗಿ ಅರಣ್ಯ ಇಲಾಖೆ ಹಮ್ಮಿಕೊಳ್ಳುವ ಜನಜಾಗೃತಿ ಕಾರ್ಯಕ್ರಮಗಳು ಯಾವುವು; ಮತ್ತು ಕಾರ್ಯಕ್ರಮದ ರೂಪುರೇಷೆಗಳಾವುವು? (ವಿವರ ನೀಡುವುದು) | ಅರಣ್ಯ ಮತ್ತು ಕಾಡು ಪ್ರಾಣಿಗಳ ರಕ್ಷಣೆಗಾಗಿ ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಜನಜಾಗೃತಿ ಕಾರ್ಯಕ್ರಮಗಳನ್ನು ಕೆಳಗೆ ನಮೂದಿಸಿರುವಂತೆ ಪ್ರಚಾರ ಘಟಕದಲ್ಲಿ ಕೈಗೊಳ್ಳಲಾಗುತ್ತಿದೆ.<br>➢ ಅರಣ್ಯ ಹಾಗೂ ವನ್ಯಜೀವಿಗಳಿಗೆ ಸಂಬಂಧಿಸಿದ ವಿಶೇಷ ದಿನ ಹಾಗೂ ವಾರಗಳನ್ನು ಆಚರಿಸುವ ಮೂಲಕ ಶಾಲಾ ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಅರಿವು ಮೂಡಿಸುವುದು.<br>➢ ಆರನೇ ತರಗತಿಯಿಂದ ಒಂಭತ್ತನೇ ತರಗತಿಯವರೆಗಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಚಿಣ್ಣರ ವನ ದರ್ಶನ ಕಾರ್ಯಕ್ರಮವನ್ನು ಆಯೋಜಿಸುವ |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಮೂಲಕ ಅರಣ್ಯ ಹಾಗೂ ವನ್ಯಜೀವಿಗಳ ಸಂರಕ್ಷಣೆಯ ಅರಿವು ಮೂಡಿಸುವುದು.<br>➢ ಇಲಾಖೆಯಲ್ಲಿ ಆಚರಿಸಲಾಗುವ ವನ್ಯಜೀವಿ ಸಪ್ತಾಹ, ವನ ಮಹೋತ್ಸವ ಕಾರ್ಯಕ್ರಮಗಳನ್ನು ವಿವಿಧ ಮಾಧ್ಯಮಗಳಾದ ದಿನಪತ್ರಿಕೆಗಳು, ದೂರದರ್ಶನ, ಇಲಾಖೆಯ ವಿವಿಧ ಸಾಮಾಜಿಕ ಜಾಲತಾಣಗಳ ಮೂಲಕ ಪ್ರಚಾರ ಪಡಿಸುವುದು.<br>➢ ಇಲಾಖೆಯ ಚಟುವಟಿಕೆಗಳ ಬಗ್ಗೆ ಉತ್ತಮ ಪರಿಣಿತಿ ಹೊಂದಿರುವ ಅಧಿಕಾರಿ ಹಾಗೂ ಸಿಬ್ಬಂದಿಗಳಿಂದ ರೇಡಿಯೋ ಮಾಧ್ಯಮ ಮುಖಾಂತರ ವಿಶೇಷ ಪ್ರಾಯೋಜಿತ ಕಾರ್ಯಕ್ರಮ "ಹಸಿರು ಹೊನ್ನು" ಕಾರ್ಯಕ್ರಮದ ಮೂಲಕ ಪ್ರಚಾರ ಪಡಿಸುವುದು.<br>➢ ಬೇಸಿಗೆ ಕಾಲದಲ್ಲಿ ಅರಣ್ಯವನ್ನು ಬೆಂಕಿಯಿಂದ ರಕ್ಷಿಸುವ ಸಲುವಾಗಿ ಪ್ರಾದೇಶಿಕ ಹಾಗೂ ವನ್ಯಜೀವಿ ಪ್ರದೇಶದ ಸಮೀಪವಿರುವ ಹಳ್ಳಿಗಳಲ್ಲಿ ಸಾರ್ವಜನಿಕರಿಗೆ "ಬೀದಿ ನಾಟಕ" ದ ಮೂಲಕ ಜಾಗೃತಿ ಮೂಡಿಸುವುದು ಹಾಗೂ ಬಸ್ ಬ್ರಾಂಡಿಂಗ್, ಪ್ರಮುಖ ಬಸ್ ನಿಲ್ದಾಣಗಳಲ್ಲಿ ಶ್ರಾವ್ಯ ಮಾಧ್ಯಮಗಳ ಮೂಲಕ, ದೂರದರ್ಶನ ಮೂಲಕ ಜನ ಜಾಗೃತಿ ಮೂಡಿಸುವುದು. |

**ಸಂಖ್ಯೆ: ಎಫ್ಇಇ 219 ಎಫ್ಎನ್ಜಿ 2024**

**(ಈಶ್ವರ ಬಿ. ಖಂಡ್ರೆ)**

**ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು.**

## ಅನುಬಂಧ-1

### ಅರಣ್ಯ ಇಲಾಖೆಯಲ್ಲಿ ಬುಡಕಟ್ಟು* ಜನಾಂಗದವರ ವೃಂದವಾರು ಮತ್ತು ಜಿಲ್ಲಾವಾರು ವಿವರ

| ಕ್ರ.ಸಂ. | ಜಿಲ್ಲೆ | ವೃಂದ - ಸಿ | ವೃಂದ- ಡಿ |
|---|---|---|---|
| 1 | ಕೊಡಗು | 53 | 21 |
| 2 | ಚಾಮರಾಜನಗರ | 38 | 37 |
| 3 | ರಾಮನಗರ | 1 | 2 |
| 4 | ಮೈಸೂರು | 48 | 37 |
| 5 | ಮಂಡ್ಯ | 0 | 0 |
| 6 | ದಕ್ಷಿಣ ಕನ್ನಡ | 3 | 3 |
| 7 | ಉಡುಪಿ | 1 | 2 |
| 8 | ಚಿಕ್ಕಮಗಳೂರು | 18 | 13 |
| 9 | ಹಾಸನ | 0 | 0 |
| 10 | ಬೆಳಗಾವಿ | 0 | 0 |
| 11 | ಬಳ್ಳಾರಿ | 0 | 0 |
| 12 | ಕೊಪ್ಪಳ | 0 | 0 |
| 13 | ಶಿವಮೊಗ್ಗ | 0 | 0 |
| 14 | ವಿಜಯನಗರ | 0 | 0 |
| 15 | ಚಿತ್ರದುರ್ಗ | 0 | 0 |
| 16 | ದಾವಣಗೆರೆ | 0 | 0 |
| 17 | ಬೆಂಗಳೂರು ನಗರ | 1 | 2 |
| 18 | ಬೆಂಗಳೂರು ಗ್ರಾಮಾಂತರ | 0 | 0 |
| 19 | ಧಾರವಾಡ | 0 | 0 |
| 20 | ಗದಗ | 0 | 0 |
| 21 | ಹಾವೇರಿ | 0 | 0 |
| 22 | ಉತ್ತರ ಕನ್ನಡ | 0 | 0 |
| 23 | ಚಿಕ್ಕಬಳ್ಳಾಪುರ | 0 | 0 |
| 24 | ಕೋಲಾರ | 0 | 0 |
| 25 | ಬಾಗಲಕೋಟೆ | 0 | 0 |
| 26 | ವಿಜಯಪುರ | 0 | 0 |
| 27 | ತುಮಕೂರು | 0 | 0 |
| 28 | ಕಲಬುರ್ಗಿ | 0 | 0 |
| 29 | ರಾಯಚೂರು | 0 | 0 |
| 30 | ಯಾದಗಿರಿ | 0 | 0 |
| 31 | ಬೀದರ್ | 0 | 0 |
| **ಒಟ್ಟು** | | **163** | **117** |

***ಟಿಪ್ಪಣಿ:*** - **ಅರಣ್ಯ ಬುಡಕಟ್ಟು ಜನಾಂಗದವರ ಅಂಕಿಅಂಶಗಳನ್ನು ಈ ಮೇಲೆ ನಮೂದಿಸಲಾಗಿದ್ದು, ಅದರಲ್ಲಿ ಇತರ ಪರಿಶಿಷ್ಟ ಪಂಗಡ ಜನಾಂಗದವರು ಸೇರಿರುವುದಿಲ್ಲ.*

12/12/24

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಸಿಬ್ಬಂದಿ ಮತ್ತು ನೇಮಕಾತಿ)